ಮನೆಗಳನ್ನು ಮಾರಿದರೆ ಮೂರು ಕೋಟಿ ಬರಬಹುದು. ಹಣ ಕೂಡಿಡುವ ಬಯಕೆ ನನಗೆ ಇಲ್ಲ. ನಿಂಗೂ ಇಲ್ಲ. ಗಣಪತಿಯ ವಶ ಇನ್ನೂ ಹತ್ತೈವತ್ತು ಎಕರೆ ಭೂಮಿ ಇದೆ. ನಿನ್ನ ಅಪ್ಪನ ಹತ್ತಿರ ಹೇಳಿ, ಗಣಪತಿ ಇನ್ನೂ ಐದು ಎಕರೆ ಭೂಮಿ ಕೊಡಲು ಒಪ್ಪಿದರೆ, ನಮ್ಮ ಸ್ವಾವಲಂಬಿ ತೋಟದ ಬಳಿ ಒಂದು ಕೆರೆ ನಿರ್ಮಿಸಿದರೆ ಹೇಗೆ ಎನ್ನುವುದು ನನ್ನ ಯೋಚನೆ. ನಗರಗಳಲ್ಲಿರುವ ಸ್ವಿಮ್ಮಿಂಗ್ ಪೂಲ್ ತರಹದ ಕೆರೆ ಅಲ್ಲ, ಪಕ್ಕಾ ಕೆರೆ. ಮೂರು ಕೋಟಿ ಸಾಕು ಅಂತ ಅನಿಸುತ್ತದೆ. ಗಣಪತಿ ಕೇಳುವ ಮೊತ್ತ ನೀನು ಕೊಡು' ಎಂದ ಮುರಾರಿ.

'ಖಂಡಿತ ಕೊಡುತ್ತೇನೆ, ನನ್ನಿಂದ ಸಾಧ್ಯವಿರುವಷ್ಟು ಕೆರೆಗೆ ಹಾಕುತ್ತೇನೆ' ಎಂದು ಅಭಿ ನಕ್ಕ. ಗಣಪತಿಯ ಬಳಿ ಐದು ಎಕರೆ ಜಾಗವನ್ನು ಕೇಳುವ ಕೆಲಸವನ್ನು ನಿನ್ನ ಅಪ್ಪ ಮಾಡಬೇಕು ಎಂದ ಮುರಾರಿ.

ಗಣಪತಿಯನ್ನು ಭೇಟಿಯಾಗುವ ಪ್ರಸ್ತಾಪ ಮಾಡಿ, ಅಭಿ ಅಪ್ಪನಿಗೆ ಭೇಟಿಯ ಉದ್ದೇಶವನ್ನು ತಿಳಿಸಿದ. 'ಖಂಡಿತ ಭೇಟಿ ಮಾಡೋಣ. ಅವರು ಖಂಡಿತ ಕೊಡುತ್ತಾರೆ; ಅವರ ಬಳಿ ನೂರಾರು ಎಕರೆ ಭೂಮಿ ಇದೆ ಎಂದು ಜನ ಹೇಳುವುದನ್ನು ಕೇಳಿದ್ದೇನೆ' ಎಂದ ನರಹರಿ.

ಅಭಿ ಮತ್ತು ಮುರಾರಿಯ ಜೊತೆಯಲ್ಲಿ ನರಹರಿ ಗಣಪತಿಯನ್ನು ಭೇಟಿ ಮಾಡಿ ಅಭಿ ಮತ್ತು ಮುರಾರಿಯ ಕೆರೆ ಮಾಡುವ ವಿಚಾರವನ್ನು ಹೇಳಿದ. ಅವರು ನಾಲ್ಕು ಕೋಟಿ ಕೆರೆಗಾಗಿ ವೆಚ್ಚ ಮಾಡಲು ಸಿದ್ಧರಾಗಿದ್ದಾರೆ' ಎಂದು ಹೇಳಿದ ನರಹರಿ, ಹಣ ಹೆಚ್ಚು ಹಣ ಸಂಪಾದಿಸಲು ತಮ್ಮ ಐಟಿ ಜಾಬನ್ನು ಪುನಃ ಮುಂದುವರಿಸಲು ಅಭಿ, ಮುರಾರಿ, ಸುಕೃತಿ ಮತ್ತು ನಳಿನಿ ಕೂಡ ತಯಾರಿದ್ದಾರೆ' ಎಂದ.

'ನೀವು ಮಾಡುವ ಈ ಕೆರೆ ನಿಮ್ಮ ಸ್ವಾವಲಂಬಿ ಕುಟುಂಬದ ಮನೆ ಮತ್ತು ತೋಟಕ್ಕಾಗಿಯೆ?' ಗಣಪತಿ ಕೇಳಿದರು.

'ಅಲ್ಲ, ಇದು ಎಲ್ಲರಿಗೂ ಬೇಕಾದ ಕೆರೆಯಾಗಿರುತ್ತದೆ. ಆದರೆ ಯಾವ ರೀತಿ ಉಪಯೋಗಿಸಬೇಕು, ಯಾವ ರೀತಿ ಉಪಯೋಗಿಸಬಾರದು ಎಂದು ಕೆಲವು ನಿಯಮಗಳನ್ನು ಮಾಡಬೇಕಾಗುತ್ತದೆ. ಅದನ್ನು ಎಲ್ಲರೂ ಅನುಸರಿಸಬೇಕಾಗುತ್ತದೆ' ಎಂದ ಮುರಾರಿ.

ಸ್ವಾವಲಂಬಿ ಮನೆ ಎಂಬ ಹೆಸರನ್ನು ನಾವು ಬದಲಾಯಿಸಲು ತೀರ್ಮಾನಿಸಿದ್ದೇವೆ. ನೀವು ಕೆರೆಗೆ ಜಾಗ ಕೊಡಲು ಒಪ್ಪಿದರೆ, 'ಸ್ವಾವಲಂಬಿ ಮನೆ'ಯ ಹೆಸರು 'ಸ್ವಾವಲಂಬಿ ದೇಶ' ಎಂದು ಬದಲಾಗುತ್ತದೆ' ಎಂದ ಅಭಿ.

ಆ ಮಾತನ್ನು ಕೇಳಿದ ಗಣಪತಿಯ ನಾಲಗೆಯಿಂದ ಸ್ವಲ್ಪ ಹೊತ್ತು ಮಾತು ಹೊರಡಲಿಲ್ಲ. ಕ್ಷಣ ಚಿಂತಿಸಿ, ಅವರಷ್ಟಕ್ಕೇ ತಲೆಯಾಡಿಸಿ, 'ಇಡೀ ಊರಿಗೆ ಬೇಕಾದ ಈ ಅದ್ಭುತ ಕೆಲಸಕ್ಕೆ ಏನು ಹೇಳಬೇಕೆಂದು ನನಗೆ ತಿಳಿಯುತ್ತಿಲ್ಲ. ಐದು ಎಕರೆ ಜಾಗವನ್ನು ಸ್ವಾವಲಂಬಿ ದೇಶಕ್ಕೆ ಉಚಿತವಾಗಿ ಕೊಡುತ್ತೇನೆ' ಎಂದಾಗ ಅವರ ಮುಖ ಸಂತೋಷದ ಕಡಲಾಯಿತು. ಇಂಥ ಸಂತೋಷವನ್ನು ಬದುಕಿನಲ್ಲಿ ಮೊದಲ ಸಲ ಕಾಣುತ್ತಿದ್ದೇವೆ ಎಂದನಿಸಿತು ಅಭಿಗೆ ಮತ್ತು ಮುರಾರಿಗೆ. ನಿಮ್ಮನ್ನು ಹೇಗೆ ಅಭಿನಂದಿಸಬೇಕು ಎಂದು ನನಗೆ ತಿಳಿಯುತ್ತಿಲ್ಲ ಎಂದರು ಗಣಪತಿ.

'ನಿಮಗೆ ಹೇಗೆ ಕೃತಜ್ಞತೆ ಹೇಳಬೇಕು ಎಂದು ನಮಗೆ ತಿಳಿಯುತ್ತಿಲ್ಲ' ಎಂದ ನರಹರಿ.

ಅದೇ ದಿನ ನರಹರಿ ಅಭಿಯೊಡನೆ, 'ಅಭಿ, ಗಣಪತಿಗೆ ನಾನು ಒಂದು ಸುಳ್ಳು ಹೇಳಿದ್ದೇನೆ, ಅವರನ್ನು ಒಮ್ಮೆ ಭೇಟಿಯಾಗಿ ಅವರ ಕ್ಷಮೆ ಯಾಚಿಸಬೇಕು' ಎಂದ.

## ತಕ್ಷಣದ ಸಿಟ್ಟು

ತಕ್ಷಣದ ಸಿಟ್ಟು  
ರಟ್ಟಾಗಿಸುವುದು  
ನಿಮ್ಮ ವ್ಯಕ್ತಿತ್ವದ  
ಗುಟ್ಟು

★ ಪ. ಚಂದ್ರಕುಮಾರ  
ಗೌನಹಳ್ಳಿ


ಈಶ್ವರ

ಅಭಿ ಆಶ್ಚರ್ಯದಿಂದ, 'ಅಪ್ಪಾ, ಏನು ಸುಳ್ಳು ಅದು? ನೀನು ಯಾವತ್ತೂ ಸುಳ್ಳು ಹೇಳಿದವನಲ್ಲ' ಎಂದ.

'ಏನು ಸುಳ್ಳು ಅಂತ ನೀನೇ ತಿಳ್ಕೊಳ್ಳಿ, ಬಾ' ಎಂದು ಅಭಿಯನ್ನು ಕರೆದುಕೊಂಡು ಗಣಪತಿಯ ಬಳಿ ಹೋದ.

34

ಸ್ವಲ್ಪ ಹೊತ್ತು ಲೋಕಾಭಿರಾಮ ಮಾತು ಮುಗಿದ ಮೇಲೆ ನರಹರಿ, 'ಗಣಪತಿ, ನಾನು ನಿಮಗೆ ಒಂದು ಸುಳ್ಳು ಹೇಳಿದ್ದೇನೆ. ಅದಕ್ಕಾಗಿ ಕ್ಷಮೆ ಕೇಳಲು ಬಂದಿದ್ದೇನೆ' ಎಂದ.

ಗಣಪತಿ ಆಶ್ಚರ್ಯದಿಂದ 'ಯಾವಾಗ, ಏನು ಸುಳ್ಳು?' ಎಂದು ಕೇಳಿದರು.

ತಾನು ಆನೆಮಹಲಿಗೆ ಬಂದು ಗಣಪತಿಯಿಂದ ಐದು ಎಕರೆ ಜಾಗ ಕೊಂಡುಕೊಂಡ ವ್ಯವಹಾರವನ್ನು ರಹಸ್ಯವಾಗಿಡಬೇಕು ಎಂದು ಹೇಳಿ, ಯಾಕೆ ಎಂದು ಹೇಳಿದ ಕತೆಯನ್ನು ಹೇಳಿ, 'ನಮ್ಮ ನಡುವಿನ ವ್ಯವಹಾರ ಈ ಊರಿನಲ್ಲಿ ಯಾರಿಗೂ ತಿಳಿಯಬಾರದು ಎಂಬ ಒಂದೇ ಉದ್ದೇಶದಿಂದ ನಾನು ಹಾಗೊಂದು ಕತೆ ಕಟ್ಟಿದೆ. ನಿಮ್ಮ ಮೇಲೆ ನನಗೆ ವಿಶ್ವಾಸವಿದ್ದರೂ ಇವರು ಯಾರೊಡನಾದರೂ ಹೇಳಿಬಿಟ್ಟರೆ ಎಂಬ ಭಯವಿತ್ತು. ಆದ್ದರಿಂದ ನಿಮ್ಮಲ್ಲಿ ಭಯವನ್ನುಂಟು ಮಾಡಲು ಹಾಗೆ ಮಾಡಿದೆ. ನಿಜವಾಗಿ ನನಗೆ ಎಂಥ ಶತ್ರುಗಳೂ ಇಲ್ಲ. ಅದೇನೆ ಇರಲಿ, ನಿಮ್ಮಂಥ ಸಜ್ಜನನಲ್ಲಿ ನಾನು ಸುಳ್ಳು ಹೇಳಬಾರದಾಗಿತ್ತು. ಅದಕ್ಕಾಗಿ ಕ್ಷಮೆ ಕೇಳುತ್ತಿದ್ದೇನೆ' ಎಂದ ನರಹರಿ.

ಗಣಪತಿ ಜೋರಾಗಿ ನಕ್ಕು, 'ಇದರಲ್ಲಿ ಕ್ಷಮಿಸುವಂಥಾದ್ದು ಏನೂ ಇಲ್ಲ ನರಹರಿ. ವಾಸ್ತವದಲ್ಲಿ ಆ ರಹಸ್ಯದಿಂದ ನನಗೂ ಉಪಕಾರವಾಯಿತು. ಆಸ್ತಿ ಮಾರಾಟ ಮಾಡಿದ್ದು ಎಲ್ಲರಿಗೂ ತಿಳಿದರೆ, ಅದರ ಜೊತೆ ನೂರು ಪ್ರಶ್ನೆಗಳು ಹುಟ್ಟಿಕೊಳ್ಳುತ್ತವೆ. ಸಂಬಂಧಿಕರು ಸುಮ್ಮನೆ ಹಣ ಕೇಳಲು ಬರ್ತಾರೆ, ಊರ ಜನ ಸಾಲ ಕೇಳಲು ಬರ್ತಾರೆ' ಎಂದು ಕ್ಷಣ ತಡೆದು, 'ಆನೆಮಹಲಿನಲ್ಲಿ ನೀವು 'ಸ್ವಾವಲಂಬಿ ದೇಶ' ಎಂಬ ಒಂದು ಹೊಸ ಕಲ್ಪನೆಯನ್ನು ಹುಟ್ಟು ಹಾಕಿ ಬೆಳೆಸಿದ್ದು ನನಗೆ ತುಂಬಾ ಸಂತೋಷವನು ಕೊಟ್ಟಿದೆ. 'ಸ್ವಾವಲಂಬಿ ದೇಶ' ಎಂಬ ಹೆಸರಿನಿಂದಲೇ ನಾವೆಲ್ಲ ರೋಮಾಂಚಿತರಾಗಿದ್ದೇವೆ. ಸ್ವಾವಲಂಬಿ ತೋಟ ಮತ್ತು ಕೆರೆ ನೋಡಿದರೆ, ಯಾರಿಗಾದರೂ ಯಾವಾಗಲೂ ಅಲ್ಲೇ ಇರೋಣ ಅನಿಸುತ್ತದೆ' ಎಂದರು.

'ಸರ್, ಕೆರೆ ಇನ್ನು ಆಗಬೇಕಷ್ಟೆ' ಎಂದು ಮುಗುಳ್ನಗುತ್ತಾ ಹೇಳಿದ ಅಭಿ

'ಕೆಲಸ ಆರಂಭಿಸಿ ಬಿಟ್ಟಿದ್ದೀರಿ. ಬಹಳ ಸಂತೋಷವಾಯಿತು. ನಿಮಗೆ ಏನು ಸಹಾಯ ಸಹಕಾರ ಬೇಕೋ ಸಂಕೋಚವಿಲ್ಲದೆ ಕೇಳಿ, ನಾನು ಸದಾ ನಿಮ್ಮ ಬಳಿಯೇ ಇರ್ತೇನೆ' ಎಂದು ಹೇಳಿ, 'ಈ ವರ್ಷವೇ ಸ್ವಾವಲಂಬಿ ದೇಶ ನಿರ್ಮಾಣಗೊಂಡ ನೆನಪಿಗೆ ನಾವು ಒಂದು ಹಬ್ಬ ಮಾಡುತ್ತೇವೆ. ಆ ಹಬ್ಬದಲ್ಲಿ ಇದಕ್ಕೆ ಕಾರಣಭೂತರಾದ ಎಲ್ಲರನ್ನೂ ಅಭಿನಂದಿಸುತ್ತೇವೆ' ಎಂದು ಗಣಪತಿ ಎದ್ದು ನಿಂತು ಅಭಿ ಮತ್ತು ನರಹರಿಯನ್ನು ಆಲಿಂಗಿಸಿದ.

ಅಭಿ ಮತ್ತು ಮುರಾರಿ ನರಹರಿಗೆ ಮನೆ ನಿರ್ಮಿಸಿಕೊಟ್ಟ ಇಂಜಿನಿಯರ್ ಮಹಾದೇವನನ್ನು ನರಹರಿ ಆಗಲೇ ಸಂಪರ್ಕಿಸಿದ್ದ.

ಬರಲು ಹೇಳಿದ ಮರುದಿನವೇ ಪುಣೆಯಿಂದ ಇಂಜಿನಿಯರ್ ಮಹಾದೇವ ಬಂದ. ಮಹಾದೇವನಿಗೆ ಅಭಿ ಮತ್ತು ಮುರಾರಿ ತೋಟವನ್ನು ತೋರಿಸಿದರು. 'ಸ್ಪೇಡ್ ವರ್ಕ್ ಆರಂಭಿಸಿ ಬಿಟ್ಟಿದ್ದೀರಿ. ಎಲ್ಲವೂ ಸರಿಯಾಗಿದೆ, ಚೆನ್ನಾಗಿದೆ' ಎಂದು ಹೇಳಿ, ಇಂಜಿನಿಯರ್ ಮಹಾದೇವ, ನಾವು ಕೆರೆಯ ವಿನ್ಯಾಸದ ಬಗ್ಗೆ ಯೋಚಿಬೇಕು. ಇನ್ನು ಒಂದು ವಾರದೊಳಗೆ ಮುಂಗಾರು ಆರಂಭವಾಗ ಬಹುದು. ಅಷ್ಟರಲ್ಲಿ ನಾವು ಎಲ್ಲಾ ಸಿದ್ಧತೆಗಳನ್ನೂ ಮಾಡಿಕೊಳ್ಳೋಣ. ಇಲ್ಲಿ ಹತ್ತಿರದಲ್ಲೇ ಒಂದು ಚಿಕ್ಕ ಹಳೆಯ ಕೆರೆಯಿದೆ. ಹೊಸ ಕೆರೆ ಸಿದ್ಧವಾದ ನಂತರ ಆ ಹಳೆಯ ಕೆರೆಯನ್ನು ಕೂಡ ಹೂಳು ತೆಗೆದು ಹೊಸದಾಗಿಸೋಣ. ಆ ಕೆರೆಯ ಸಿಲ್ಟನ್ನು ನಮ್ಮ ತೋಟಕ್ಕೆ ಹಾಕಬಹುದು. ಅದು ಒಳ್ಳೆಯ ಗೊಬ್ಬರವಾಗಿರುತ್ತೆ. ನಮ್ಮ ಕೆಲಸಕ್ಕೆ ಬೇಕಾದ ನೀರನ್ನು ಪಂಪಿನ ಮೂಲಕ ಅಲ್ಲಿಂದ ನಿಮ್ಮ ತೋಟದ ಅಂಚಿಗೆ ಹಾಯಿಸಬಹುದು. ಸಿಮೆಂಟ್ ಮತ್ತು ಕಲ್ಲನ್ನು ಅಗತ್ಯವಿರುವಲ್ಲಿ ಮಾತ್ರ ಉಪಯೋಗಿಸೋಣ. ಕಗ್ಗಲ್ಲು ಮತ್ತು ಸಿಮೆಂಟಿನ ಮೇಲೆ ಕೂಡ ಹಾವಸೆ, ಕಳೆಗಿಡಗಳು ಬೆಳೆಯುತ್ತವೆ. ಕಲ್ಲುಗಳೆಡೆಯಲ್ಲಿ ಹಾವುಗಳು ಕೂಡ ಸೇರಿಕೊಳ್ಳುತ್ತವೆ. ಆದ್ದರಿಂದ ಕೆರೆಯ ದಂಡೆ ಮತ್ತು ಟಾಪಿಗೆ ಇಟ್ಟಿಗೆ ಬಳಸೋಣ ಇತ್ತೀಚೆಗೆ ಮಾರುಕಟ್ಟೆಗೆ ಬಂದಿರುವ ಒಂದು ಮೆಟಲ್ಲುಗಳನ್ನು